ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು

**C.C.No.795/2026.**

ದಿನಾಂಕಃ**16.06.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು | ವಿಜಯ್ ಕುಮಾರ್ | ಚಾಸಾ-1, ಪ್ರಾಸ-1 |
| ತಂದೆಯ ಹೆಸರು | ಕೆ ಪಿ ರುದ್ರಪ್ಪ | |
| ವಯಸ್ಸು (ವರ್ಷಗಳಲ್ಲಿ) | 57 | |
| ಉದ್ಯೋಗ | ವ್ಯವಸಾಯ | |
| ವಾಸ | ಕೋಟೆ, ಕಡೂರು ಟೌನ್ | |

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>

ವಿಮಲಮ್ಮ ಎಂಬುವವರು ನನ್ನ ತಾಯಿ. ಚಾಸಾ 2, 3 ರವರ ಪರಿಚಯವಿದೆ. ನನ್ನ ತಾಯಿ ವಿಮಲಮ್ಮರವರು ಕಡೂರಿನ ಕೋಟೆಯಲ್ಲಿ ವಾಸವಿದ್ದಾರೆ. ಈಗ ನೋಡುತ್ತಿರುವ ದಾಖಲೆಯಲ್ಲಿರುವ ಸಹಿಯು ನನ್ನದು, ಸದರಿ ದಾಖಲೆಯು ದೂರು ಆಗಿದ್ದು ಅದನ್ನು ನಾನೇ ದಾಖಲಿಸಿರುತ್ತೇನೆ. ಸದರಿ ದೂರನ್ನು ನಿಪಿ1 ಎಂದು ಸಾಕ್ಷಿಯ ಸಹಿಯನ್ನು ನಿಪಿ1 ಎ ಎಂದು ಗುರುತಿಸಲಾಯಿತು.

ದಿಃ19.02.2026 ರಂದು ರಾತ್ರಿ ನಮ್ಮ ಮನೆಯಲ್ಲಿ ಕಳ್ಳತನವಾಗಿದ್ದು ಸದರಿ ಮನೆಯಲ್ಲಿ ನನ್ನ ತಾಯಿ ಇದ್ದರು. ದಿಃ20.02.2026 ರಂದು ಬೆಳಗ್ಗೆ ಸುಮಾರು 5-6 ಗಂಟೆಯಲ್ಲಿ ಕಳ್ಳತನವಾಗಿದೆ ಎಂಬ ವಿಚಾರವನ್ನು ಚಾಸಾ 3 ರವರು ನನಗೆ ಹೇಳಿರುತ್ತಾರೆ. ನಂತರ ನಾನು ಮತ್ತು ನನ್ನ ಮಗ ಶಿವಕುಮಾರ್ ಎಂಬುವವರು ನನ್ನ ತಾಯಿಯ ಮನೆಗೆ ಬಂದಿರುತ್ತೇವೆ. ಅಲ್ಲಿ ನೋಡಿದಾಗ ಮನೆಯ ಬಾಗಿಲು ತೆರೆದಿತ್ತು ಸದರಿ ವೇಳೆಯಲ್ಲಿ ಪೊಲೀಸರಿಗೆ ಪೋನ್ ಮಾಡಿ ವಿಚಾರ ತಿಳಿಸಿರುತ್ತೇವೆ. ಅಲ್ಲಿಗೆ ಪೊಲೀಸರು ಬಂದ ನಂತರ ಮನೆಯ ಒಳಗೆ ಹೋಗಿ ನೋಡಿದಾಗ 4 ಬೀರುಗಳು ತೆರೆದಿತ್ತು, ಅವುಗಳನ್ನು ಪೊಲೀಸರು ಬರೆದುಕೊಂಡಿರುತ್ತಾರೆ. ಅದಕ್ಕೆ ನಾನು ನಿಪಿ 1 ರಡಿ ಸಹಿ ಮಾಡಿರುತ್ತೇನೆ. ಸದರಿ ಕಳ್ಳತನದಿಂದ ಚಿನ್ನದ 2 ಗ್ರಾಂ ಉಂಗುರ, 6.650 ಗ್ರಾಂನ ಚೈನ್, 2 ಗ್ರಾಂ ನ 2 ಜೊತೆ ಓಲೆ, 2.450 ಗ್ರಾಂ ಉಂಗುರ ಕಳ್ಳತನವಾಗಿತ್ತು.

ಎರಡು ದಿನಗಳ ನಂತರ ಪೊಲೀಸರು ಕಳ್ಳತನವಾಗಿದ್ದ ನಮ್ಮ ಮನೆಗೆ ಬಂದು ಬೆಳಗ್ಗೆ 11.15 ರಿಂದ 12.15 ರ ವರೆಗೂ ಸ್ಥಳ ಮಹಜರ್ ಮಾಡಿರುತ್ತಾರೆ. ಸಾಕ್ಷಿಯು ಸದರಿ ಸ್ಥಳ ಮಹಜರಿನಲ್ಲಿನ ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿಪಿ2 ಎಂದು ಸಾಕ್ಷಿಯ ಸಹಿಯನ್ನು ನಿಪಿ2 ಎ ಎಂದು ಗುರುತಿಸಲಾಯಿತು. ನಿಪಿ2 ಕ್ಕೆ ಸಾಕ್ಷಿದಾರರಾಗಿ ಚಾಸಾ 2, 3 ರವರ ಸಹಿ ಪಡೆದಿರುತ್ತಾರೆ.

ಸುಮಾರು 8-10 ದಿನಗಳ ನಂತರ ಕಳ್ಳ ಸಿಕ್ಕಿರುವುದಾಗಿ ಪೊಲೀಸರು ಮಾಹಿತಿ ನೀಡಿರುತ್ತಾರೆ ಮತ್ತು ಸದರಿಯವರನ್ನು ಸ್ಥಳ ಗುರುತಿಸಲು ಮನೆಗೆ ಕರೆದುಕೊಂಡು ಬಂದಿರುತ್ತಾರೆ, ಸದರಿ ವೇಳೆಯಲ್ಲಿ ಪೋಟೋ ತೆಗೆದಿರುತ್ತಾರೆ.

ಈಗ ನೋಡುತ್ತಿರುವ ಪೋಟೋಗಳನ್ನು ನಮ್ಮ ಮನೆಯಲ್ಲಿ ಪೊಲೀಸರು ಮಹಜರಿಗೆ ಬಂದ ವೇಳೆಯಲ್ಲಿ ತೆಗೆಯಲಾಗಿದೆ. ಸಾಕ್ಷಿಯು ಸದರಿ ಪೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ 3 ರಿಂದ 7 ಎಂದು ಸಿ.ಡಿ.ಯನ್ನು ಹಾಜರುಪಡಿಸುವ ತಕರಾರಿಗೆ ಒಳಪಟ್ಟು ಗುರುತಿಸಲಾಯಿತು.

ಕಳ್ಳತನವಾಗಿದ್ದ ಒಡವೆಗಳನ್ನು ಗುರುತಿಸುತ್ತೇನೆ. ಈಗ ಸದರಿ ಒಡವೆಗಳು ನನ್ನ ವಶದಲ್ಲಿ ಇದ್ದು, ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತಿದ್ದೇನೆ. ಸದರಿ ಒಡವೆಗಳನ್ನು ಪೋಟೋದೊಂದಿಗೆ ಹೋಲಿಕೆ ಮಾಡಿ ಸರಿ ಇದ್ದ ಕಾರಣ ಪೋಟೋವನ್ನು ನಿಪಿ 8 ಎಂದು ಗುರುತಿಸಿ ಒಡವೆಗಳನ್ನು ಸಾಕ್ಷಿಗೆ ಹಿಂದಿರುಗಿಸಲಾಯಿತು.

ನಮ್ಮ ಮನೆಯಲ್ಲಿ ಕಳ್ಳತನ ಮಾಡಿದ್ದವರು ವೆಂಕಟೇಶ್ ಮತ್ತು ಇನ್ನೊಬ್ಬರು ಎಂದು ನಂತರ ತಿಳಿದು ಬಂತು. ಸದರಿಯವರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ವಿ.ಸಿ.ಯಲ್ಲಿ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಅವರೊಂದಿಗೆ ಈಗ ನೋಡುತ್ತಿರುವ ಆರೋಪಿಯು ಸಹಃ ಇದ್ದರು ಆದರೆ ಅವರ ಹೆಸರು ನನಗೆ ಗೊತ್ತಿಲ್ಲ.

**(**ಈ ಹಂತದಲ್ಲಿ ಸಾಕ್ಷಿಯು ಅಭಿಯೊಜನೆಯ ಪ್ರಕರಣಕ್ಕೆ ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ**,** ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ಅವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು**)**

<u>ಪಾಟೀಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>

ನನ್ನ ತಾಯಿಯು ಕೋಟೆಯ ಅರಸುಮಕ್ಕಳ ಬೀದಿಯಲ್ಲಿ ವಾಸವಿದ್ದಾರೆ ಎಂದರೆ ಸರಿ. ಕಳ್ಳತನ ನನ್ನ ತಾಯಿಯ ಮನೆಯಲ್ಲಿ ಆಗಿದೆ ಎಂದರೆ ಸರಿ. ಆ ಸಂಬಂಧ ದಿಃ20.02.2026 ರಂದು ರಾತ್ರಿ 8.15 ಕ್ಕೆ ನಾನು ಠಾಣೆಗೆ ಹೋಗಿ ದೂರು ದಾಖಲಿಸಿದ್ದೆ ಎಂದರೆ ಸರಿ. ನಿಪಿ 2 ರ ಮಹಜರ್ ಅನ್ನು ನನ್ನ ತಾಯಿಯ ಮನೆಯಲ್ಲಿ ಮಾಡಲಾಗಿತ್ತು ಎಂದರೆ ಸರಿ. ನಿಪಿ 2 ನ್ನು ಮಧ್ಯಾಹ್ನ 12.20 ರಿಂದ 1.20 ರವರೆಗೂ ಮಾಡಿ ಓದಿ ಹೇಳಿ ಸಹಿ ಪಡೆದರು ಎಂದರೆ ಸರಿ. ನಿಪಿ 2 ರ ಕಾಲಕ್ಕೆ ಸ್ಥಳದ ನಕ್ಷೆ ಸಹಃ ತಯಾರು ಮಾಡಿದ್ದರು ಎಂದರೆ ಸರಿ. ಮತ್ತೊಬ್ಬ ಆರೋಪಿಯ ಹೆಸರು ಪರಶುರಾಮ ಎಂದರೆ ಸರಿ.

<u>ಪಾಟೀಸವಾಲುಃ ಆರೋಪಿ ಪರ ವಕೀಲರಿಂದ ಃ</u>

ನಿಪಿ1 ದೂರನ್ನು ಕೋಟೆಯಲ್ಲಿರುವ ನನ್ನ ತಾಯಿಯ ಮನೆಯ ವಿಳಾಸವನ್ನು ನಮೂದಿಸಿ ನೀಡಿದ್ದೇನೆ ಎಂದರೆ ಸರಿ. ದೂರನ್ನು ಪೊಲೀಸರು ಮನೆಗೆ ಬಂದಿದ್ದಾಗ ನೀಡಲಾಗಿದೆ ಎಂದರೆ ಸರಿ. ದೂರನ್ನು ಪೊಲೀಸರು ಬರೆದಿರುತ್ತಾರೆ. ನಿಪಿ 1 ರಲ್ಲಿ ಏನು ಬರೆದಿದೆ ಎಂದು ನನಗೆ ಸಂಪೂರ್ಣವಾಗಿ ಗೊತ್ತಿಲ್ಲ ಎಂದರೆ ಸರಿ. ನಿಪಿ 1 ರಲ್ಲಿರುವ ಇಂದಾ ವಿಳಾಸದಲ್ಲಿ ನಮ್ಮ ಮನೆಯ ವಿಳಾಸ ನಮೂದಿಸಿದ್ದೇನೆ ಎಂದರೆ ಸರಿ. ನಾನು ಜೆ.ಪಿ.ಲಾಡ್ಜ್ ಹಿಂಭಾಗದಲ್ಲಿನ ಬಾಡಿಗೆ ಮನೆಯಲ್ಲಿ ವಾಸವಾಗಿದ್ದೇನೆ ಎಂದು ನಮೂದಿಸಿಲ್ಲ ಎಂದರೆ ಸರಿ. ನನ್ನ ತಾಯಿ ದೂರು ದಾಖಲಿಸಿಲ್ಲ ಎಂದರೆ ಸರಿ. ನನ್ನ ತಾಯಿಗೆ ದೂರು ದಾಖಲು ಮಾಡಲು ತೊಂದರೆ ಇರಲಿಲ್ಲ. ನನ್ನ ತಾಯಿಯು ವಾಸವಾಗಿರುವ ಮನೆಯ ಅಕ್ಕ-ಪಕ್ಕದಲ್ಲಿ ನಿಪಿ 3, 4 ರಲ್ಲಿ ಕಾಣುವಂತೆ 2 ಮನೆಗಳು ಇವೆ. ಸದರಿ ಮನೆಗೆ ಲಗತ್ತಾಗಿ ಇರುವ ಮನೆಯಲ್ಲಿ ಶಾಹಿನಾ ಎಂಬ ಶಿಕ್ಷಕರು ವಾಸವಿದ್ದಾರೆ. ಸದರಿಯವರು ಕಳ್ಳತನದ ಬಗ್ಗೆ ನಮಗೆ ಮಾಹಿತಿ ನೀಡಿರಲಿಲ್ಲ. ಚಾಸಾ3 ರವರು ನಮ್ಮ ತಾಯಿಯ ಮನೆಯ ನಂತರದ 3 ನೇ ಮನೆಯಲ್ಲಿ ವಾಸವಿದ್ದಾರೆ. ನಿಪಿ 4 ರಂತೆ ಬಾಗಿಲಿನ ಚಿಲಕವನ್ನು

ಮುರಿದಿಲ್ಲ ಎಂದರೆ ಸರಿ. ನಿಪಿ 5 ರ ಫೋಟೋದಂತೆ ಬೀರು ಒಳಗಿನ ಕಪಾಟು ಮುಚ್ಚಿದೆ ಎಂದರೆ ಸರಿ. ನನ್ನ ತಾಯಿಯು ಒಡವೆಗಳನ್ನು ಬೀರುವಿನಲ್ಲಿ ಇಟ್ಟಿದ್ದು, ಕಪಾಟಿನಲ್ಲಿ ಇಟ್ಟಿರಲಿಲ್ಲ. ಬೀರುವಿನ ಬೀಗಗಳನ್ನು ಮುರಿದಿರದೆ, ಫೋಟೋದಲ್ಲಿ ಇರುವಂತೆ ಚೆನ್ನಾಗಿಯೇ ಇದೆ ಎಂದರೆ ಸರಿ.

ಒಡವೆಗಳು ನನ್ನ ತಾಯಿಗೆ ಸಂಬಂಧಿಸಿದ್ದು ಎಂದು ತೋರಿಸಲು ರಶೀದಿ ಹಾಜರುಪಡಿಸಿಲ್ಲ ಎಂದರೆ ನಾನು ಕೊಟ್ಟಿರುತ್ತೇನೆ ಎನ್ನುತ್ತಾರೆ. ಅಮಾನತ್ತು ಪಡಿಸಿಕೊಂಡಿರುವ ಒಡವೆಗಳು ನನ್ನ ತಾಯಿಗೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ. ನಾನು ಆರೋಪಿತರನ್ನು ಈ ದಿನ ಹೊರತು ಪಡಿಸಿ ಯಾವತ್ತು ನೋಡಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಮನೆಯ ಬಳಿ ಪೊಲೀಸರು ಕರೆತಂದಿದ್ದಾಗ ನೋಡಿರುತ್ತೇನೆ ಎನ್ನುತ್ತಾರೆ. ಆರೋಪಿತರನ್ನು ಮನೆಯ ಬಳಿ ಕರೆತಂದಿದ್ದಾಗ ನಾನು ಇರಲಿಲ್ಲ ಎಂದರೆ ಸರಿಯಲ್ಲ. ನಾನು ಇರದ ಕಾರಣದಿಂದಲೇ ಆರೋಪಿಗಳು ಬಂದಿದ್ದಾಗ ತೆಗೆದ ಫೋಟೋದಲ್ಲಿ ನಾನು ಇಲ್ಲ ಎಂದರೆ ಸರಿಯಲ್ಲ. ಪೊಲೀಸರು ಆರೋಪಿಗಳೊಂದಿಗೆ ಸ್ಥಳಕ್ಕೆ ಬಂದಿದ್ದಾಗ ಚಾಸಾ 2, 3 ರವರು ಹಾಜರು ಇದ್ದರು. ಅವರನ್ನು ಹೊರತು ಪಡಿಸಿ ಬೇರೆ ಯಾರು ಇದ್ದರು ಎಂದು ನನಗೆ ಗೊತ್ತಿಲ್ಲ.

ನಿಪಿ 2 ರ ಮಹಜರ್ ಟೈಪ್ ಮಾಡಲಾಗಿತ್ತು. ನಿಪಿ 2 ಕ್ಕೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿ. ನಿಪಿ 2 ಕ್ಕೆ ಚಾಸಾ 3, 4 ರವರು ಮನೆಯ ಬಳಿ ಸಹಿ ಮಾಡಿರುತ್ತಾರೆ. ಸದರಿಯವರು ಎಷ್ಟು ಸಹಿ ಮಾಡಿರುತ್ತಾರೆ ಎಂದು ನನಗೆ ಹೇಳಲಾಗುವುದಿಲ್ಲ. ಸದರಿಯವರು ದೂರಿಗೆ ಸಹಿ ಮಾಡಿದ್ದರು. ನಿಪಿ 3 ರಿಂದ 8 ರ ಫೋಟೋಗಳನ್ನು ಯಾವ ಕಾರಣಕ್ಕೆ ತೆಗೆಯಲಾಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಮ್ಮ ಮನೆಯಲ್ಲಿಯಾವುದೇ ಕಳ್ಳತನವಾಗಿಲ್ಲ, ಯಾವುದೇ ಬಾಗಿಲನ್ನು ಒಡೆಯದಿದ್ದರು ಸಹಃ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕಳ್ಳತನಕ್ಕು ಆರೋಪಿತರಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 2 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ

ಎಂದರೆ ಸರಿ. ಸ್ಥಳದ ನಕ್ಷೆಯನ್ನು ಠಾಣೆಯಲ್ಲಿ ತಯಾರಿಸಲಾಗಿದೆ ಎಂದರೆ ಸರಿ.

ಮರು ವಿಚಾರಣೆ ಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.